ಸರ್ಕಾರ ಬರಲಿ, ಅದು ಬದಲಾವಣೆಯಾಗುವುದಿಲ್ಲ. ಒಬ್ಬರು ಮುಖ್ಯಮಂತ್ರಿಯವರು ಬದಲಾವಣೆ ಆದಕೂಡಲೇ ಇದು ಸಹ ಬದಲಾವಣೆ ಆಗಬೇಕು ಅಂತ ಇಲ್ಲ. ನಮ್ಮ ನಿಲುವು ಸ್ಪಷ್ಟ ಇದೆ. ಇದನ್ನು ನಾವು ಕೇಂದ್ರಸರ್ಕಾರಕ್ಕೂ ಹೇಳಿದ್ದೇವೆ, ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೂ ಹೇಳಿದ್ದೇವೆ. ಇದು ಯಾರೋ ಬಂದು ಹೇಳುತ್ತಾರೆ, ಅಥವಾ ಪತ್ರಿಕೆಯಲ್ಲಿ ಬಂದರೆ ಆ ಬೆದರಿಕೆಗೆ ಈ ಸದನ ಹೆದರುವುದಿಲ್ಲ. ಈ ಕರ್ನಾಟಕದಲ್ಲಿ ಯಾರೂ ಹೆದರುವುದಿಲ್ಲ. ಅವರು ಏನು ಬಂದು ಹೇಳಿಬಿಡುತ್ತಾರೆ, ಎಂ.ಇ.ಎಸ್. ನವರು ಹೇಳಿದ ಕೂಡಲೇ ಅವರು ಇಲ್ಲಿರುವ ಕನ್ನಡಿಗರನ್ನು ಓಡಿಸಬಹುದು ಎಂದು ಹೇಳುವುದು ಇದೆಯಲ್ಲ, ಅವೆಲ್ಲ ಕತೆಗಳು. ದಂತ ಕಥೆಗಳು. ಅದೆಲ್ಲದಕ್ಕೂ ಈ ಸರ್ಕಾರ ಹೆದರುವುದಿಲ್ಲ. ಇಂತಹ ಪರಿಸ್ಥಿತಿ ಬರುವುದಿಲ್ಲ. ಬಂದರೂ ಕೂಡ ಅದನ್ನು ಹೇಗೆ ನಿಭಾಯಿಸಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಧೈರ್ಯವನ್ನು ನಾವು ಮೆಚ್ಚಿದ್ದೇವೆ. ನಾನು ಏನು ಹೇಳುತ್ತಿದ್ದೇನೆ ಎಂದರೆ, ಒಂದು ನಿರ್ಣಯವನ್ನು ತಾವು ಮಾಡಿ. ತಾವು ಒಂದು ನಿರ್ಣಯವನ್ನು ಮಾಡಿದರೆ, ಆಗ ಏನಾಗುತ್ತದೆ ಎಂದರೆ, ಸರ್ಕಾರದ ನಿಲುವು ಸ್ಪಷ್ಟವಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಈ ಸದನದಲ್ಲಿ ನಿರ್ಣಯದ ಅವಶ್ಯಕತೆ ಇದ್ದರೆ, ಮಾನ್ಯ ಸದಸ್ಯರಿಗಿಂತ ಮುಂಚೆ ನಿರ್ಣಯದ ಅವಶ್ಯಕತೆ ಇದ್ದರೆ ಒಂದು ಕ್ಷಣ ಕೂಡ ನಾವು ತಡಮಾಡುವುದಿಲ್ಲ.

ಅಧ್ಯಕ್ಷರು : ಅವಶ್ಯಕತೆ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಜೆ.ಹೆಚ್. ಪಟೇಲ್ : ಹೌದು, ಅವಶ್ಯಕತೆ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಈ ಪದಗಳನ್ನು ತಮ್ಮ ಅನುಕೂಲತೆಗೆ ಅನುಗುಣವಾಗಿ ಬಳಸುತ್ತೀರಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರು ಹೇಳಿದ ಮೇಲೆ ನಾನು ಬೇಡವೆಂದು ಹೇಳುವುದಕ್ಕಾಗುತ್ತದಾ?

ಗಮನ ಸೆಳೆಯುವ ಸೂಚನೆಗಳು

ಅ) ಧಾರವಾಡ ಜಿಲ್ಲಾ ಕೋ-ಆಪರೇಟಿವ್ ಆಯಿಲ್ ಮಿಲ್ ಸೀಡ್ ಪ್ರೊಸೆಸಿಂಗ್ ಸೊಸೈಟಿಯು ಸರ್ಕಾರದಿಂದ ಪಡೆದ ಹಣ ಹಾಗೂ ಸಾಲವನ್ನು ಪಡೆದಿದ್ದರೂ ಸಹ ಆಡಳಿತದಲ್ಲಿನ ಅವ್ಯವಹಾರದ ಬಗ್ಗೆ

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಸನ್ಮಾನ್ಯ ಸಭಾಧ್ಯಕ್ಷರೇ, ಧಾರವಾಡ ಜಿಲ್ಲೆಯು ಗದಗ್‌ನಲ್ಲಿರುವ ಕೋ-ಆಪರೇಟಿವ್ ಆಯಿಲ್ ಮಿಲ್ ಸೀಡ್ ಪ್ರೊಸೆಸಿಂಗ್ ಸೊಸೈಟಿಯವರು ನಾಲ್ಕು ಕೋಟಿ ರೂಪಾಯಿಗಳಷ್ಟು ಶೇರು ಹಣ ಮತ್ತು ಸಾಲ ಪಡೆದು ಈ ಸಂಸ್ಥೆಯನ್ನು ಇವತ್ತು ಬಂದ್ ಮಾಡಿರುವುದರಿಂದ ಈಗಾಗಲೇ ಅನೇಕ ಜನ ನೌಕರರು ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಇದರ ಬಗ್ಗೆ ಮತ್ತು ಈ ಸಂಸ್ಥೆ ಇಷ್ಟೊಂದು ಅಧಿಕ ಮೊತ್ತದ ಸರ್ಕಾರದಿಂದ ಸಹಾಯ ಪಡೆದು, ಜಾಗತಿಕ ಸಂಸ್ಥೆಯ ಸಾಲ ಪಡೆದು ಮತ್ತು ಎನ್.ಸಿ.ಡಿ.ಸಿ.ಯಿಂದ ಸಾಲ ಪಡೆದಿರುವ ಈ ಸಂಸ್ಥೆ ಇಷ್ಟೊಂದು ಹಾನಿಗೆ ಒಳಗಾಗಿ, ಇವತ್ತು ಅಲ್ಲಿಯ ನೌಕರರು ಸಂಬಳ ಇಲ್ಲದೆ ಬೀದಿಪಾಲಾಗಿರುವುದರ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀ ಉದಾಸಿಯವರು ಕೇಳಿದ ಪ್ರಶ್ನೆಗೆ ಉತ್ತರ ಈ ರೀತಿ ಇದೆ.

ಮಾನ್ಯ ಸಹಕಾರ ಸಚಿವರಿಗೆ ದಿನಾಂಕ 4-1-95ರಂದು ಸಂಘದ ನೌಕರರು ಮನವಿಯನ್ನು ಸಲ್ಲಿಸಿ ತಮ್ಮ ಸಂಘದ ಪುನಶ್ಚೇತನಕ್ಕಾಗಿ ಆರ್ಥಿಕ ಸಹಾಯವನ್ನು ನೀಡುವಂತೆ ಕೋರಿರುತ್ತಾರೆ. ಪುನಶ್ಚೇತನಗೊಳಿಸಲು ಸಾಧ್ಯವಿಲ್ಲದಿದ್ದರೆ ಸಂಘವನ್ನು ಸಮಾಪನೆಗೊಳಿಸಿ ಕಾನೂನು ಮತ್ತು ನಿಯಮದಂತೆ ನೌಕರರಿಗೆ ಸಿಗಬೇಕಾದ ವೇತನ ಬಾಕಿ ಮತ್ತು ಇತರ ಬಾಕಿ ಮೊತ್ತವನ್ನು ಇತ್ಯರ್ಥ ಮಾಡಿಸಿಕೊಡುವಂತೆ ವಿನಂತಿಸಿರುತ್ತಾರೆ.

ಈಗ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾಗಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಗದಗ್, ಇವರು ನೌಕರರು ದಿನಾಂಕ 7-3-95ರಿಂದ ಸದರಿ ಉಪವಾಸ ಸತ್ಯಾಗ್ರಹ ಹೂಡುತ್ತಿರುವುದನ್ನು ದೂರವಾಣಿಯಲ್ಲಿ ತಿಳಿಸಿರುತ್ತಾರೆ. ಹಾಲಿ ದಾಸ್ತಾನು ಇರುವ ಹಳೇ ಎಣ್ಣೆಯನ್ನು ಟೆಂಡರ್ ಮೂಲಕ ಹರಾಜು ಹಾಕಿದರೆ ರೂ. 2 ರಿಂದ 3 ಲಕ್ಷ ಬರುವ ಸಾಧ್ಯತೆ ಇರುತ್ತದೆ. ಇದರಿಂದ ಹೆಚ್ಚಿನಂಶ ವೇತನವನ್ನು ಪಾವತಿಸಬಹುದಾಗಿದೆ.

ಸರ್ಕಾರದ ಪತ್ರ ಸಂಖ್ಯೆ:ಸಿಎಂಡಬ್ಲ್ಯೂ 66 ಪಿಎಂಸಿ 95 ದಿನಾಂಕ 4-4-95ರಲ್ಲಿ ಸಂಘವು ಸ್ಥಗಿತಗೊಂಡಿದೆ ಎಂದೂ, ನೌಕರರ ವೇತನ ಪಾವತಿ ಮಾಡುವ ಚೈತನ್ಯ ಹೊಂದಿಲ್ಲವೆಂದೂ ಇದನ್ನು ತಪ್ಪಿಸಲು ಮಾನ್ಯ ಸಕ್ಕರೆ ಜವಳಿ, ಪರಿಸರ ವಿಜ್ಞಾನ ಮತ್ತು ತಾಂತ್ರಿಕ ಸಚಿವರನ್ನು ಸಂಘದ ನೌಕರರು ಸಂಪರ್ಕಿಸಿದ್ದು ತಿಳಿದು ಬರಲಾಗಿ ನಿಬಂಧಕರು ಈ ಬಗ್ಗೆ ಪ್ರತ್ಯೇಕ ಕ್ರಮ ತೆಗೆದುಕೊಳ್ಳುವವರಿದ್ದಾರೆ. ಇದನ್ನು ಪ್ರತ್ಯೇಕವಾಗಿ ಗಮನಿಸಲಾಗುತ್ತಿದೆ.

ಸಂಘವನ್ನು ಮೂಲತಃ "ಧಾರವಾಡ ಜಿಲ್ಲಾ ಎಣ್ಣೆ ಬೀಜ ಸಂಸ್ಕರಣ ಸಹಕಾರ ಸಂಘ ನಿಯಮಿತ" ಎಂದು 1959ರಲ್ಲಿ ನೋಂದಣಿ ಮಾಡಿದ್ದು 1969ರಿಂದ ಕಾರ್ಯ ಪ್ರಾರಂಭಿಸಿರುತ್ತದೆ. 1976ರವರೆಗೂ ಸಂಘವು ಲಾಭದಲ್ಲಿ ಕಾರ್ಯ ನಿರ್ವಹಿಸದೆ ನಷ್ಟದಲ್ಲಿಯೇ ಮುಂದುವರೆದು 1976ರ ನಂತರ ತನ್ನ ಕಾರ್ಯವನ್ನು ಸ್ಥಗಿತಗೊಂಡಿರುತ್ತದೆ. ಅನಂತರ ಗದಗ್ ಸಹಕಾರಿ ನೂಲಿನ ಗಿರಣಿ ನಿಯಮಿತ, ಹುಲಿಕೋಟಿ ಮತ್ತು ರೈತರ ಸಹಕಾರಿ ಎಣ್ಣೆ ಗಿರಣಿ ನಿಯಮಿತ, ಬಿಂಕದಕಟ್ಟಿ, ಈ ಎರಡೂ ಸಂಘಗಳು ಒಟ್ಟುಗೂಡಿ ಈ ಗದಗ್ ಎಣ್ಣೆ ಗಿರಣಿಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿಕೊಂಡಿರುತ್ತದೆ. ಆದರೂ, ಈ ಸಂಸ್ಕರಣ ಘಟಕ ಲಾಭದಾಯಕವಾಗಿ ನಡೆಯದೆ 1994ಸೆಪ್ಟೆಂಬರ್ ತಿಂಗಳಿನಿಂದ ಸಂಪೂರ್ಣವಾಗಿ ಸಂಸ್ಕರಣ ಕಾರ್ಯವನ್ನು ಸ್ಥಗಿತಗೊಳಿಸಿರುತ್ತದೆ. ಸಂಘವು ಪ್ರಾರಂಭದಿಂದಲೂ ಹೆಚ್ಚಿನ ನಷ್ಟ ಅನುಭವಿಸುತ್ತಿದೆ. ದಿನಾಂಕ 31-3-95ಕ್ಕೆ ಸಂಘದ ಸಂಚಿತ ನಷ್ಟವು ರೂ. 8.12ಕೋಟಿಯಾಗಿರುತ್ತದೆ. ದಿನಾಂಕ 31-3-1993ರವರೆಗೆ ಒಟ್ಟು ಸಂಚಿತ ನಷ್ಟ ರೂ. 5.68 ಕೋಟಿಗಳಾಗಿರುತ್ತದೆ.

ಸಂಘಕ್ಕೆ ಭೇಟಿ ನೀಡಿ ಪರಿಸ್ಥಿತಿಯ ಬಗ್ಗೆ ವರದಿ ನೀಡಬೇಕೆಂದು ಬೆಳಗಾವಿ ವಿಭಾಗದ ಸಂಯುಕ್ತ ನಿಬಂಧಕರಿಗೆ ದೂರವಾಣಿ ಮೂಲಕ ತಿಳಿಸಲಾಗಿ ಸಂಯುಕ್ತ ನಿಬಂಧಕರು ವರದಿಯನ್ನು ಸಲ್ಲಿಸಿರುತ್ತಾರೆ. ಅದರ ಪ್ರಕಾರ ಆಡಳಿತ ಮಂಡಳಿಯು ಸಂಘವನ್ನು ಪುನಶ್ಚೇತನಗೊಳಿಸಲು ಸರ್ಕಾರ ರೂ. 2.00 ಕೋಟಿ ಬಡ್ಡಿ ರಹಿತ ಸಾಲ ಕೊಟ್ಟರೆ ಪುನಶ್ಚೇತನಗೊಳಿಸುವುದಾಗಿಯೂ, ಇಲ್ಲವಾದಲ್ಲಿ ಯಾರಿಗಾದರೂ ಗುತ್ತಿಗೆಗೆ ಕೊಡಬಹುದಾಗಿಯೂ ಅಥವಾ ಸರ್ಕಾರವೇ ವಹಿಸಿಕೊಳ್ಳಬಹುದಾಗಿಯೂ ತಿಳಿಸಿದ್ದಾರೆ. ಈ ಮಧ್ಯೆ, ಈಗ ಸಂಘದಲ್ಲಿ ದಾಸ್ತಾನು ಇರುವ ಎಣ್ಣೆಯನ್ನು ಟೆಂಡರ್ ಮೂಲಕ ಮಾರಿದಲ್ಲಿ ನೌಕರರಿಗೆ ವೇತನ ಪಾವತಿ ಮಾಡಬಹುದಾಗಿ ತಿಳಿದುಬಂದಿದೆ. ಟೆಂಡರ್

ಮೂಲಕ ಮಾರಾಟವನ್ನು ದಿನಾಂಕ 5-4-95ಕ್ಕೆ ನಿಗದಿಪಡಿಸಿರುತ್ತದೆ. ಇದು ತಾತ್ಕಾಲಿಕ ಪರಿಹಾರವನ್ನು ಒದಗಿಸಬಹುದಲ್ಲದೆ, ಶಾಶ್ವತವಾಗಿ ವೇತನ ಪಾವತಿ ಮಾಡಲು ವಿರ್ಪಾಡು ಮಾಡುವುದು ಸಾಧ್ಯವಾಗುವುದಿಲ್ಲ. ಸಂಘವನ್ನು ಸಮಾಪನೆಗೊಳಿಸುವುದು ಹಾಗೂ ನೌಕರರನ್ನು ಕೆಲಸದಿಂದ ಬಿಡುಗಡೆ ಮಾಡುವುದು ಶಾಶ್ವತ ಪರಿಹಾರವಾಗಬಲ್ಲುದು.

ಮೇಲೆ ಹೇಳಿದ ಸಲಹೆಗಳನ್ನು ಪರಿಶೀಲಿಸಲಾಗುತ್ತಿದೆ. ಸಂಘಕ್ಕೆ ಸರ್ಕಾರದಿಂದ ಈ ಕೆಳಗಿನಂತೆ ಹಣ ಸಹಾಯ ಮಾಡಿರುತ್ತದೆ.

1. ಪಾಲು ಬಂಡವಾಳ ರೂ. 1,42,53,300

2. ಸಾಲ ರೂ. 2,63,61,000

(ಎನ್‌ಸಿಡಿಸಿ ಯಿಂದ ಪಡೆದು ನೇರವಾಗಿ ಸರ್ಕಾರದಿಂದ ಕೊಡಲ್ಪಟ್ಟಿದೆ)

ಸಂಘವು ರೂ. 13,36,500 ಸುಸ್ತಿ ಬಡ್ಡಿ ಹಾಗೂ ರೂ 1,46,41,304-20 ಸರ್ಕಾರಕ್ಕೆ ಬಡ್ಡಿಯನ್ನು (ಬ್ಯಾಂಕುಗಳಿಗೆ ಪಾವತಿಸಬೇಕಾದ ಬಡ್ಡಿಯನ್ನು ಹೊರತುಪಡಿಸಿ) ಪಾವತಿಸಬೇಕಾಗಿದೆ. ಕಮಿಷನ್ ವಿಜೆಂಟರುಗಳಿಗೆ ರೂ. 4,42,44,014.00 ಮತ್ತು ಇತರ ಜವಾಬ್ದಾರಿಗಳಿಗೆ ರೂ. 7.98 ಲಕ್ಷ ಪಾವತಿಸಬೇಕಾಗಿದೆ.

1982-83ರಲ್ಲಿ ಎನ್‌ಸಿಡಿಸಿಯ ಸಹಾಯದಿಂದ ಒಂದು ಪುನಶ್ಚೇತನ ಯೋಜನೆಯನ್ನು ರೂಪಿಸಿದ್ದು, ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿಸಿ 218 ಸಿಇಪಿ 81 ದಿನಾಂಕ 30-3-83ರಲ್ಲಿ ರೂ. 48.00 ಲಕ್ಷವನ್ನು ಶೇಕಡ ಹನ್ನೆರೆಡು ಮುಕ್ಕಾಲು ಬಡ್ಡಿ ದರದಲ್ಲಿ ಮಾರ್ಜಿನ್ ಮನಿಯಾಗಿ ಮಂಜೂರು ಮಾಡಿರುತ್ತದೆ. ಈ ಹಣ 14 ಕಂತುಗಳಲ್ಲಿ ಮರು ಪಾವತಿ ಮಾಡಬೇಕಾಗಿರುತ್ತದೆ. ಅಲ್ಲದೆ ಎನ್‌ಸಿಡಿಸಿಯವರು ರೂ. 189.15 ಲಕ್ಷವನ್ನು ಘಟಕದ ವಿಸ್ತರಣೆಗಾಗಿ ಅವರ ಪತ್ರ ಸಂಖ್ಯೆ 1.11.:82 ಪಿ(ಎಎಸ್) ದಿನಾಂಕ:7.10.86ರಂತೆ ಮಂಜೂರು ಮಾಡಿರುತ್ತಾರೆ, ಇದರಲ್ಲಿ ರೂ. 119.48 ಲಕ್ಷವನ್ನು ಬಿಡುಗಡೆ ಮಾಡಿದ್ದು ರೂ. 23.27ಲಕ್ಷವನ್ನು ವೇಸ್ ಅಂಡ್ ಮಿನ್ಸ್ ಮುಂಗಡವಾಗಿಯೂ ರೂ. 96.26 ಲಕ್ಷವನ್ನು ಮಾರ್ಜಿನ್ ಮನಿಯಾಗಿಯೂ ಮಂಜೂರು ಮಾಡಿರುತ್ತಾರೆ. ಇಷ್ಟು ಹಣ ಸಹಾಯ ಹಾಗೂ ಹೊಸ ಮಿಷನರಿಗಳನ್ನು ಅಳವಡಿಸಿದ ನಂತರವೂ ಸಂಘವನ್ನು ಪುನಶ್ಚೇತನಗೊಳಿಸುವುದು ಸಾಧ್ಯವಾಗಿಲ್ಲ.

1959ರಿಂದ ಈವರೆಗೂ ಎನ್‌ಸಿಡಿಸಿಯ ಆರ್ಥಿಕ ಸಹಾಯದೊಂದಿಗೆ ರಾಜ್ಯ ಸರ್ಕಾರವು ಹಣದ ಸಹಾಯ ಮಾಡುತ್ತಲೇ ಬಂದರೂ ಘಟಕವನ್ನು ಕೆಲಸ ಮಾಡಲು ಅಥವಾ ಪುನಶ್ಚೇತನಗೊಳಿಸುವುದು ಸಾಧ್ಯವಾಗಿಲ್ಲ. ಯಾವುದಾದರೊಂದು ಸಂಘವು ತನ್ನ ನೌಕರರಿಗೆ ವೇತನ ಕೊಡುವುದಕ್ಕೆಂದು ಅಸ್ತಿತ್ವದಲ್ಲಿರುವುದು ಸಾಧ್ಯವಿಲ್ಲ. ಇದರ ಸದಸ್ಯರ ಹಿತವನ್ನು ಗಣನೆಗೆ ತೆಗೆದುಕೊಂಡಿಲ್ಲ. ಈ ಸಂಘದಲ್ಲಿ ಸದಸ್ಯರ ಹಿತಕ್ಕೆ ಆದ್ಯತೆ ಸಿಕ್ಕಿರುವುದಿಲ್ಲ.

ಸಂಘದಲ್ಲಿ ಒಟ್ಟು 78 ನೌಕರರಿದ್ದು ಒಂದು ತಿಂಗಳಿಗೆ ಸಿಬ್ಬಂದಿ ವೇತನ ರೂ. 78,000 ಆಗಿದೆ. ಸಂಘದ ನೌಕರರು ತಮ್ಮ ಆಹಾರ, ವಸತಿ, ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ಸರಿದೂಗಿಸಲು ಸಾಧ್ಯವಾಗುತ್ತಿಲ್ಲ. ದಿನಾಂಕ 31-3-95ಕ್ಕೆ ಒಟ್ಟು ಪಾವತಿ ಮಾಡಲು ಬಾಕಿ ಇರುವ ವೇತನ ರೂ. 3.65 ಲಕ್ಷಗಳಾಗಿವೆ.

ನೌಕರರ ವೇತನ ಕೂಡ ಸಂಘದ ಆಸ್ತಿಯನ್ನು ವಿಕ್ರಯಿಸಿ ಸಂದಾಯ ಮಾಡಲಾಗಿದೆ. ಇದೇ ಪರಿಸ್ಥಿತಿ ಮುಂದುವರೆದಲ್ಲಿ ಸರ್ಕಾರ ಕೊಟ್ಟಿರುವ ಪಾಲು ಬಂಡವಾಳ ಹಾಗೂ ಸಾಲ ನಶಿಸಿ ಹೋಗಿ ಅದನ್ನು ವಸೂಲಿ ಮಾಡಿಕೊಳ್ಳಲು ಯಾವ ಮೂಲವೂ

ಉಳಿಯಲಾರದು. ನೌಕರರ ವೇತನವು ಸಂಘದ ಮೊದಲ ಆದ್ಯತೆಯಾಗಿದ್ದು ಅದನ್ನು ಪಾವತಿಸಲೇಬೇಕಾಗುತ್ತದೆ. ರಾಜ್ಯ ಸರ್ಕಾರ ಸದ್ಯದಲ್ಲಿ ಇದಕ್ಕೆ ಹಣ ಸಂದಾಯ ಮಾಡುವ ಸಾಧ್ಯತೆ ಇರುವುದಿಲ್ಲ. ಏಕೆಂದರೆ ಸಂಘ ಈಗಾಗಲೇ ಕೊಟ್ಟಿರುವ ಹಣ ಸಹಾಯವನ್ನು ಹಿಂತಿರುಗಿಸಿರುವುದಿಲ್ಲ. ಸರ್ಕಾರವು ಈ ಸಂಘದ ಆಡಳಿತವನ್ನು ವಹಿಸಿಕೊಂಡು ಮುಂದಿನ ಕ್ರಮ ಜರುಗಿಸಲು ಯೋಚಿಸಲಾಗುವುದು.

ಆದರೂ ಕೂಡ ಇವತ್ತು ಆ ಒಂದು ಸಂಸ್ಥೆ ಬಹಳ ಹಾನಿಯಲ್ಲಿದೆ ಮತ್ತು ಅಲ್ಲಿಯ ನೌಕರರು ಕೂಡ ಅಲ್ಲಿ ಸತ್ಯಾಗ್ರಹ ಕೂತಿದ್ದಾರೆ. ಅವರ ಹಿತದೃಷ್ಟಿಯಿಂದ ಇವತ್ತು ಏನು ಮಾಡಬೇಕು ಎನ್ನುವುದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ಜಂಟಿ ನಿರ್ದೇಶಕರಿಗೆ ಹೇಳಿದ್ದೇನೆ. ಆಡಳಿತ ಮಂಡಳಿಯ ಬಗ್ಗೆ ಕ್ರಮ ತೆಗೆದುಕೊಂಡು ಅದನ್ನು ಏನಾದರೂ ನಾವು ಹೊಸದಾಗಿ ತೆಗೆದುಕೊಳ್ಳಬೇಕೋ ಅಥವಾ ಯಾವರೀತಿ ಸುಧಾರಿಸಬೇಕು ಎನ್ನುವುದರ ಬಗ್ಗೆ ಪ್ರಯತ್ನ ನಡೆಸಿದ್ದೇವೆ.

(ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

(ಆ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ "ಸ್ವಂತ ಮನೆ ಹೊಂದಿ" ಯೋಜನೆಯಡಿಯಲ್ಲಿ ಹಣ ದುರುಪಯೋಗವಾಗಿರುವುದರ ಬಗ್ಗೆ

ಶ್ರೀ ಎ. ರಾಮದಾಸ್ : (ಕೃಷ್ಣರಾಜ) ಮಾನ್ಯ ಉಪಾಧ್ಯಕ್ಷರೇ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸ್ವಂತ ಮನೆಹೊಂದಿ ಯೋಜನೆಯಲ್ಲಿ ಹಣ ದುರುಪಯೋಗವಾಗಿರುವುದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದುತ್ತೇನೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕಳೆದ ಹಲವಾರು ವರ್ಷಗಳಿಂದಲೂ ವಿವಿಧ ಬಡಾವಣೆಗಳಲ್ಲಿ ವಿವಿಧ ವರ್ಗದ ಮನೆಗಳನ್ನು "ಸ್ವಂತ ಮನೆ ಹೊಂದುವ" ಯೋಜನೆಯಲ್ಲಿ ಸಾರ್ವಜನಿಕರಿಗೆ ಹಂಚಲು ಕ್ರಮ ಕೈಕೊಂಡಿರುತ್ತದೆ.

ಈ ಯೋಜನೆಯ ಮನೆಗಳ ನಿರ್ಮಾಣದ ಕೆಲಸಗಳನ್ನು ಟೆಂಡರ್ ಮೂಲಕ ನುರಿತ ಹಾಗೂ ಅನುಭವ ಉಳ್ಳ ಗುತ್ತಿಗೆದಾರರ ಮೂಲಕ ಮಾಡಿಸಲಾಗುತ್ತಿದೆ. ಈ ಮನೆಗಳ ನಿರ್ಮಾಣದ ಕೆಲಸಗಳನ್ನು ಪ್ರಾಧಿಕಾರದ ತಜ್ಞ ಅಭಿಯಂತರರುಗಳಿಂದ ಉಸ್ತುವಾರಿ ಮಾಡಿಸಲಾಗುತ್ತಿದೆ ಹಾಗೂ ಯಾವುದೇ ಕಳಪೆ ಕಾಮಗಾರಿಗಳಿಗೆ ಅವಕಾಶವಿರುವುದಿಲ್ಲ. ಮನೆಗಳು ಪೂರ್ಣಗೊಂಡ ಕೂಡಲೇ ಪ್ರಾಧಿಕಾರದ ವತಿಯಿಂದ ಅಂತಿಮ ಬೆಲೆಯನ್ನು ನಿಗಧಿಪಡಿಸಿ ನಂತರ ಮಂಜೂರಾದವರಿಗೆ ಮನೆಯ ಅಂತಿಮ ಬೆಲೆ ಮತ್ತು ಮತ್ತಿತರ ನಿಯಮಗಳನ್ನು ಪೂರೈಸಿ ಸ್ವಾಧೀನ ಪಡೆಯುವಂತೆ ತಿಳುವಳಿಕೆ ನೀಡಲಾಗುವುದು.

ಮೈಸೂರು ಪ್ರಾಧಿಕಾರವು ಇತ್ತೀಚೆಗೆ ವಿವಿಧ ಬಡಾವಣೆಗಳಲ್ಲಿ ವಿವಿಧ ವರ್ಗದ 1772 ಮನೆಗಳಿಗೆ ಮಂಜೂರಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು, ಈ ಪ್ರಕಟಣೆ ಅನುಗುಣವಾಗಿ ಕೇವಲ 390 ಅರ್ಜಿಗಳು ಬಂದಿದ್ದು ಆಯಾಯ ಬಡಾವಣೆಗಳಲ್ಲಿ ಲಭ್ಯವಿರುವ ಮನೆಗಳನ್ನು ಅರ್ಹ ಅರ್ಜಿದಾರರಿಗೆ ಮಂಜೂರು ಮಾಡಲಾಗಿದ್ದು, ಮನೆ ಲಭ್ಯವಿಲ್ಲದ ಬಡಾವಣೆಯಲ್ಲಿ ಮನೆಬೇಕೆಂದು ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಲಭ್ಯವಿರುವ ಬೇರೆ ಬಡಾವಣೆಯಲ್ಲಿ ಅವರಿಂದ ಒಪ್ಪಿಗೆ ಪತ್ರ ಪಡೆದು ಮಂಜೂರಾತಿ ಮಾಡಲಾಗುತ್ತಿದೆ.